# ಸಮಷ್ಟಿ ಸಾಧನೆಗಾಗಿ ಆವಶ್ಯಕ ಗುಣಗಳು

## ಮನೋಗತ

ಮನುಷ್ಯನ ನಿಜವಾದ ಅಂತಿಮ ಧ್ಯೇಯವು 'ಈಶ್ವರಪ್ರಾಪ್ತಿ'ಯಾಗಿದೆ. ಸ್ವಂತದ ಆಧ್ಯಾತ್ಮಿಕ ಉನ್ನತಿಗಾಗಿ ಈಶ್ವರನ ಗುಣಗಳನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸುವುದೆಂದರೆ ವ್ಯಷ್ಟಿ ಸಾಧನೆಯಾಗಿದೆ. ಈ ಗುಣಗಳನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸುವಾಗ, ಕಾಲಕ್ಕನುಸಾರ ಕೇವಲ ಸ್ವಂತಕ್ಕಾಗಿ ಪ್ರಯತ್ನಿಸಿದರೆ ಸಾಕಾಗುವುದಿಲ್ಲ. ಸದ್ಯದ ಕಲಿಯುಗದಲ್ಲಿ ಸಮಾಜದ ಸಾತ್ತ್ವಿಕತೆಯ ಪ್ರಮಾಣವು ಬಹಳ ಕಡಿಮೆಯಾಗಿರುವುದರಿಂದ, ಸಮಾಜದ ಸಾತ್ತ್ವಿಕತೆಯನ್ನು ಹೆಚ್ಚಿಸಲು, ಸಮಾಜದಿಂದ ಸಾಧನೆಯನ್ನು ಮಾಡಿಸಿಕೊಳ್ಳುವುದು ಅವಶ್ಯಕವಾಗಿದೆ. ಅದಕ್ಕೆ 'ಸಮಷ್ಟಿ ಸಾಧನೆ'ಯನ್ನುತ್ತಾರೆ. ಕಾಲಕ್ಕನುಸಾರ ವ್ಯಷ್ಟಿ ಸಾಧನೆಗೆ ಶೇ. ೩೦ ರಷ್ಟು ಮತ್ತು ಸಮಷ್ಟಿ ಸಾಧನೆಗೆ ಶೇ. ೭೦ ರಷ್ಟು ಮಹತ್ವವಿದೆ.

ಪ್ರಸ್ತುತ ಹಿಂದೂದ್ವೇಷಿ ಮತ್ತು ಧರ್ಮದ್ರೋಹಿಗಳು ಹಿಂದೂ ಧರ್ಮ, ದೇವತೆ, ಸಂತರು, ರಾಷ್ಟ್ರಪುರುಷರು ಮತ್ತು ಧರ್ಮಗ್ರಂಥಗಳನ್ನು ಬಹಿರಂಗವಾಗಿ ವಿಡಂಬನೆ ಮಾಡುತ್ತಿದ್ದಾರೆ. ಹಿಂದೂಗಳನ್ನು ಮತಾಂತರಿಸುವ ಪ್ರಸಂಗಗಳಲ್ಲಿ ಹೆಚ್ಚಳವಾಗುತ್ತಿದೆ. ರಾಷ್ಟ್ರದ್ರೋಹಿ ಮತ್ತು ಧರ್ಮದ್ರೋಹಿಗಳಿಂದ ರಾಷ್ಟ್ರ ಮತ್ತು ಧರ್ಮವನ್ನು ರಕ್ಷಿಸುವುದು ಹಾಗೂ ಹಿಂದೂಸಂಘಟನೆಗಾಗಿ ಪ್ರಯತ್ನಿಸುವುದು, ಸಮಷ್ಟಿ ಸಾಧನೆಯ ಅಂಗವಾಗಿದೆ. ಇದರ ಅಂತರ್ಗತವಾಗಿ ಧರ್ಮಪ್ರಸಾರ ಮಾಡಲು ಮತ್ತು ಹಿಂದೂಗಳನ್ನು ಸಂಘಟಿಸಲು ಸಾಧಕರಲ್ಲಿ ಸಂಘಟನಾಕೌಶಲ್ಯ, ನೇತೃತ್ವ, ವ್ಯಾಪಕತೆ ಇತ್ಯಾದಿ ಗುಣಗಳಿರುವುದು ಅವಶ್ಯಕವಾಗಿದೆ.

ಸಮಷ್ಟಿ ಸಾಧನೆಗಾಗಿ ಅವಶ್ಯಕ ಗುಣಗಳು (ಉದಾ. ಸಂಘಟನಾಕೌಶಲ್ಯ, ಅಹಂ ಕಡಿಮೆಯಿರುವುದು, ವ್ಯಾಪಕತೆ, ನೇತೃತ್ವ, ದೂರದೃಷ್ಟಿ, ಸೇವಾಭಾವ, ಕರ್ತವ್ಯದಕ್ಷತೆ, ತತ್ತ್ವನಿಷ್ಠತೆ, ಕ್ಷಾತ್ರವೃತ್ತಿ, ರಾಷ್ಟ್ರಾಭಿಮಾನ, ಧರ್ಮಾಭಿಮಾನ, ನಿಃಸ್ವಾರ್ಥ ಪ್ರೇಮ), ಹಾಗೆಯೇ ಸಣ್ಣ ಮಕ್ಕಳಲ್ಲಿ ಸಂಸ್ಕಾರ ಮಾಡಲು ಅವಶ್ಯಕ ಗುಣಗಳು, ಬಾಲಸಂಸ್ಕಾರವರ್ಗ ತೆಗೆದುಕೊಳ್ಳುವ ಸಾಧಕರಲ್ಲಿರಬೇಕಾದ ಅವಶ್ಯಕ ಗುಣಗಳು, ಸಾಧಕರು ಸಮಾಜದಲ್ಲಿ ವರ್ತಿಸುವ ಸಂದರ್ಭದಲ್ಲಿನ ಗುಣಗಳು ಮತ್ತು ವ್ಯವಸ್ಥಾಪನೆಯ ಸೇವೆ ಮಾಡುವ ಸಾಧಕರಿಗಾಗಿ ಅವಶ್ಯಕ ಗುಣಗಳು ಇತ್ಯಾದಿಗಳ ಬಗ್ಗೆ ಸನಾತನದ ಸಾಧಕರಿಗೆ ಈಶ್ವರನ ಕೃಪೆಯಿಂದ ದೊರಕಿದ ಜ್ಞಾನವನ್ನು ಈ ಗ್ರಂಥದಲ್ಲಿ ಕೊಡಲಾಗಿದೆ.

ಸಾಧನೆಯು ಯೋಗ್ಯ ರೀತಿಯಲ್ಲಿ ಆಗುತ್ತಿದ್ದಲ್ಲಿ, ಸಾಧಕನ ಆಧ್ಯಾತ್ಮಿಕ ಉನ್ನತಿ ಯಾಗುತ್ತದೆ. ಆಧ್ಯಾತ್ಮಿಕ ಉನ್ನತಿಯ ವಿವಿಧ ಹಂತಗಳ ಕುರಿತಾದ ಮಾಹಿತಿಯನ್ನೂ ಈ ಗ್ರಂಥದಲ್ಲಿ ಕೊಡಲಾಗಿದೆ. (ವ್ಯಷ್ಟಿ ಸಾಧನೆಯು ಉತ್ತಮವಾಗಿ ಆಗಲು ಯಾವ ಗುಣಗಳು ಅವಶ್ಯಕವಾಗಿದೆ ಎಂಬುದರ ಮಾಹಿತಿಯನ್ನು ಇನ್ನೊಂದು ಗ್ರಂಥದಲ್ಲಿ ಕೊಡಲಾಗಿದೆ.)

ಈ ಗ್ರಂಥವನ್ನು ಓದಿ ಪ್ರತಿಯೊಬ್ಬರಿಗೆ ತಮ್ಮೊಂದಿಗೆ ಸಮಾಜದಲ್ಲಿನ ವ್ಯಕ್ತಿಗಳಲ್ಲೂ ಈಶ್ವರೀ ಗುಣಗಳನ್ನು ವೃದ್ಧಿಸುವ ಪ್ರೇರಣೆ ಸಿಗಲಿ ಎಂದು ಶ್ರೀಗುರುಚರಣಗಳಲ್ಲಿ ಪ್ರಾರ್ಥನೆ !

- ಸಂಕಲನಕಾರರು

## ಅನುಕ್ರಮಣಿಕೆ

(ಕೆಲವು ಮಹತ್ವದ ಅಂಶಗಳನ್ನು '*' ಈ ಗುರುತಿನಲ್ಲಿ ಕೊಡಲಾಗಿದೆ.)


೧. ವ್ಯಷ್ಟಿ ಮತ್ತು ಸಮಷ್ಟಿ ಸಾಧನೆ ೧೬

* ಸಾಧಕನ ತಳಮಳವು ಸಮಷ್ಟಿ ಕಾರ್ಯಕ್ಕೆ ಪೂರಕವಾದ ನಂತರ ಈಶ್ವರನು ತಾನಾಗಿ ಕಾರ್ಯ ಮಾಡುವುದೆಂದರೆ ಈಶ್ವರೀ ಕೃಪೆ ೧೬

* ಇಡೀ ಬ್ರಹ್ಮಾಂಡದಲ್ಲಿ ಹಿಂದೂ ಧರ್ಮದ ಧ್ವಜವನ್ನು ಹಾರಿಸಬೇಕೆಂಬುದನ್ನು ಗಮನದಲ್ಲಿಟ್ಟುಕೊಂಡು ಸ್ವಂತದ ಸ್ಥೂಲ ಮತ್ತು ಸೂಕ್ಷ್ಮ ಸಾಧನೆಯನ್ನು ಹೆಚ್ಚಿಸಿ ! ೧೬

೨. ಸಮಷ್ಟಿ ಸಾಧನೆ ೧೯

೨ ಅ. ಸಮಷ್ಟಿಯೆಂದರೆ ಸಾಧನೆ ಮಾಡುವ ಎಲ್ಲ ಸಾಧಕರು ೧೯

೨ ಆ. ಸಂಘಟಿತರಾಗಲು ಸಮಷ್ಟಿ ಸಾಧನೆಯನ್ನು ಹೆಚ್ಚಿಸುವುದು ಅವಶ್ಯಕ ೧೯

೨ ಇ. ಸಮಷ್ಟಿ ಸಾಧನೆಗೆ ಅವಶ್ಯವಿರುವ ಗುಣಗಳು ೨೦

೧. ಸಂಘಟನಾಕೌಶಲ್ಯ ೨೦

೨. ಅಹಂ ಕಡಿಮೆಯಿರುವುದು (ಸಮಷ್ಟಿ ಕಾರ್ಯ ಮಾಡಲು ಪ.ಪೂ. ಡಾಕ್ಟರರ ಸಮಷ್ಟಿ ಅಹಂನಷ್ಟು, ಅಂದರೆ ಕನಿಷ್ಠಪಕ್ಷ ಶೇ. ೧ ರಷ್ಟು ಅಹಂ ಅವಶ್ಯಕ) ೨೧

೩. ವ್ಯಾಪಕತೆ ೨೧

೪. ಸಣ್ಣ ಮಕ್ಕಳಲ್ಲಿ ಸಂಸ್ಕಾರ ನಿರ್ಮಾಣಕ್ಕಾಗಿ ಅವಶ್ಯಕ ಗುಣಗಳು ೨೨

೫. ಇತರ ಕೆಲವು ಗುಣಗಳು ೨೫

೬. ಬಾಲಸಂಸ್ಕಾರವರ್ಗವನ್ನು ತೆಗೆದುಕೊಳ್ಳುವ ಸಾಧಕರಲ್ಲಿರಬೇಕಾದ ಅವಶ್ಯಕ ಗುಣಗಳು ೨೬

* ಪ್ರಾಮಾಣಿಕತೆ; ತಳಮಳ ಮತ್ತು ಜಿಗುಟುತನ; ಆಜ್ಞಾಧಾರಕತನ; ಪ್ರೇಮಿ ಮತ್ತು ಶಿಸ್ತುಪ್ರಿಯ; ನಮ್ರ ಮತ್ತು ಪ್ರೇಮಿ; ಇತರರನ್ನು ಗೌರವಿಸುವುದು

೭. ಸಮಾಜದಲ್ಲಿ ವರ್ತಿಸುವ ಸಂದರ್ಭದಲ್ಲಿನ ಸಾಧಕನ ಗುಣ ೨೭

* ನಿರಪೇಕ್ಷತೆ; ಸ್ವಾವಲಂಬಿ; ವೃತ್ತಿಯು ಆನಂದಿತವಾಗಿರುವುದು; ಇತರರನ್ನು ಅರಿತುಕೊಳ್ಳುವುದು; ಕ್ಷಮೆ, ಪರೋಪಕಾರ ಮತ್ತು ಪ್ರೀತಿ

೮. ವ್ಯವಸ್ಥಾಪನೆಯ ಸೇವೆ ಮಾಡುವ ಸಾಧಕರಿಗೆ ಅವಶ್ಯಕ ಗುಣಗಳು ೩೪

* ಹೊಂದಿಕೊಳ್ಳುವುದು; ಕಾರ್ಯಪದ್ಧತಿಯಲ್ಲಿ ಸುಸೂತ್ರತೆಯನ್ನು ತರುವುದು; ದೂರದೃಷ್ಟಿ (ದೂರದೃಷ್ಟಿಯುಕ್ತ ವಿಚಾರಸರಣಿಯನ್ನಿಡುವುದು); ತತ್ತ್ವನಿಷ್ಠೆ, ಸತ್ಯಪ್ರಿಯ (ಸತ್ಯವನ್ನು ತಪಾಸಣೆ ಮಾಡುವುದು); ದಂಡ ಮತ್ತು ಪಾರಿತೋಷಕದ ನೀತಿಯನ್ನು ಪರಿಣಾಮಕಾರಿಯಾಗಿ ಉಪಯೋಗಿಸುವುದು

೨ ಈ. ಸೇವಾಕೇಂದ್ರ ಮತ್ತು ಆಶ್ರಮ ೩೭

೨ ಉ. ಆಯೋಜನೆಯ ಸಭೆ ಹೇಗಿರಬೇಕು ? ೩೮

೨ ಊ. ಸಾಧಕ-ಸೇವಕರಿಗೆ ಅವಶ್ಯಕವಿರುವ ಗುಣಗಳ ತುಲನಾತ್ಮಕ ಮಹತ್ವ ೩೯

೨ ಎ. ಸಾಧಕ ಮತ್ತು ಸಮಾಜ ೩೯

**೩. ಈಶ್ವರೀ ರಾಜ್ಯದ ಸ್ಥಾಪನೆ ೪೦**

**೪. ಉಚ್ಚ ಲೋಕದಲ್ಲಿ ಸ್ಥಾನ ಸಿಗಲು ಅವಶ್ಯಕ ಸಮಷ್ಟಿ ಗುಣಗಳ ಪೈಕಿ ಸ್ವಭಾವದೋಷ-ನಿರ್ಮೂಲನೆಗೆ ಎಲ್ಲಕ್ಕಿಂತ ಹೆಚ್ಚು ಮಹತ್ವ ೪೧**

**೫. ಇಬ್ಬರು ಸಾಧಕಿಯರಲ್ಲಿರುವ ಸಮಷ್ಟಿ ತಳಮಳಕ್ಕೆ ಸಂಬಂಧಿಸಿದ ಅನುಭೂತಿ ೪೨**

**೬. ಆಧ್ಯಾತ್ಮಿಕ ಉನ್ನತಿ ೪೩**

* ಸಾಧನೆ ಮತ್ತು ಮಹತ್ವ * ಉನ್ನತಿಯ ಹಂತಗಳು ೪೪

* ಉನ್ನತಿಯಾಗುವ ಪ್ರಮಾಣ ೪೯

**೭. ಮೃತ್ಯು ೪೯**

೭ ಅ. ಸಾಧನೆಯ ಹೊರತು ಮೃತ್ಯುವನ್ನು ಎದುರಿಸುವುದು (ವಿನ್ಮುಖತಾ) ಮತ್ತು ಸಾಧನೆ ಮಾಡುತ್ತಾ ಮೃತ್ಯುವನ್ನು ಎದುರಿಸುವುದು (ವಿನ್ಮುಕ್ತತಾ) ೪೯

೭ ಆ. ಸರ್ವಸಾಮಾನ್ಯ ಜೀವ ಮತ್ತು ಶೇ. ೫೦ ಕ್ಕಿಂತ ಹೆಚ್ಚು ಮಟ್ಟವಿರುವ ಸಾಧಕನು ಮಾಡಿಕೊಂಡ ಆತ್ಮಹತ್ಯೆ ೫೦

೭ ಇ. ಮೃತ್ಯು ನಂತರ ೫೧

**ಟಿಪ್ಪಣಿ** - ೧. ಗ್ರಂಥದಲ್ಲಿ ಬಹಳಷ್ಟು ಕಡೆಗಳಲ್ಲಿ 'ಪ.ಪೂ. ಡಾ. ಆಠವಲೆ' ಅಥವಾ 'ಪ.ಪೂ. ಡಾಕ್ಟರ' ಎಂಬ ಉಲ್ಲೇಖವಿದೆ, ಅದು ಗ್ರಂಥದ ಸಂಕಲನಕಾರರಾದ ಪರಾತ್ಪರ ಗುರು ಡಾ. ಜಯಂತ ಬಾಳಾಜಿ ಆಠವಲೆಯವರ ಬಗ್ಗೆ ಇದೆ.

೨. ಕೆಲವೊಮ್ಮೆ ಕೆಟ್ಟ ಶಕ್ತಿಗಳು ಸಾಧಕರಿಗೆ ಈಶ್ವರನ ಕೃಪೆಯಿಂದ ಪ್ರಾಪ್ತವಾಗುವ ಜ್ಞಾನದಲ್ಲಿ ಹಸ್ತಕ್ಷೇಪ ಮಾಡಿ ತಪ್ಪು ಮಾಹಿತಿಯನ್ನು ಕೊಡುತ್ತವೆ. ಈ ಗ್ರಂಥದಲ್ಲಿ ಇಂತಹ ತಪ್ಪುಗಳನ್ನು ಸರಿಪಡಿಸಿ ತಪ್ಪು ಮಾಹಿತಿಯನ್ನು '*' ಗುರುತಿನಿಂದ ತೋರಿಸಲಾಗಿದೆ.